ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಮಂತ್ರಿಗಳು ವಿಶೇಷ ಸಂದರ್ಭಗಳಿದ್ದರೆ ಕೆಲಕೆಲವು ಭಾಗಗಳಲ್ಲಿ ಅದು ಅರೆಮ್ಯುನರೇಟೀವ್ ಆಗಿದ್ದರೂ ಅದನ್ನು ಕೈಗೊಳ್ಳುತ್ತೇವೆಂದು ಅಪ್ಪಣೆ ಕೊಡಿಸಿದರು.

• ವಿಶೇಷ ಸಂದರ್ಭಗಳಲ್ಲಿ ಎಂದರೇನು ? ಕ್ಷಾಮಪೀಡಿತ ಪ್ರದೇಶಗಳೆಂತಲೋ ? ಭಾಗಗಳೆಂದರೆ—ಮುಲೆನಾಡು ಅಥವಾ ಮತ್ತೆ ಯಾವ ಅಭಿಪ್ರಾಯಗಳಿರಬೇಕು ? ಇಲ್ಲವೇ ಮಂತ್ರಿಗಳ ಅಭಿಪ್ರಾಯಕ್ಕೆ ಸರಿಬಂದ ಕೆಲಸಗಳೆಂತಲೇ ? ಏನು ? ಎಂಬುದನ್ನು ಅವರು ಸ್ವಲ್ಪ ವಿಮರ್ಶೆ ಮಾಡುವರೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಜನರಿಗೆ ಯಾವ ಯಾವ ಭಾಗದಲ್ಲಿ ಆಹಾರದ ಅಭಾವ ಉಂಟಾಗಿದೆ, ಕ್ಷಾಮ ಪೀಡಿತ ಪ್ರದೇಶಗಳಾವುವು ಎನ್ನತಕ್ಕ ಅಂಶಗಳನ್ನೆಲ್ಲಾ ಈಗ ಪರಿಶೀಲನೆ ಮಾಡುತ್ತಿದ್ದೇವೆ. ಈ ಬಗ್ಗೆ ಸದ್ಯದಲ್ಲೇ ಒಂದು ನರ್ಕಾರಿ ಆಜ್ಞೆ ಹೊರಬೀಳುವುದರಲ್ಲಿದೆ. ಈಗ ತಾವು ಕೇಳುತ್ತಿರುವ ಕೆರೆಯಿಂದ ನರ್ಕಾರಕ್ಕೆ ಕನಿಷ್ಠಪಕ್ಷ ಒಂದು ಪರ್ಸೆಂಟಾದರೂ ರಿಟರ್ನ್ ಬಂದು, ಅರಸೀಕೆರೆ ಪ್ರದೇಶ ಅಂಥ ಆಹಾರಾಭಾವಕ್ಕೊಳಪಟ್ಟಿರುವ ಪ್ರದೇಶವೆಂದು ನಿರ್ಧರಿನಲ್ಪಟ್ಟರೆ, ಅದನ್ನು ಅಗತ್ಯವಾಗಿ ದುರಸ್ತಿ ಮಾಡಿಸಲಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸಚಿವರು ಈ ಕಾರ್ಯ ತಡವಾಗುವುದಕ್ಕೆ ಕಾರಣಗಳನ್ನು ಹೇಳುತ್ತ ಅನೇಕ ಸಾರಿ ಡಿಸೈನ್‌ಗಳನ್ನು ಬದಲಾವಣೆ ಮಾಡಲಾಯಿತು, ಎಷ್ಟಿಮೇಟುಗಳನ್ನು ರಿವೈಸ್ ಮಾಡಲಾಯಿತು ಎಂಬುದಾಗಿ ಹೇಳಿದರು. ಹಾಗೆ ಡಿಸೈನ್‌ಗಳನ್ನೂ, ಎಸ್ಟಿಮೇಟುಗಳನ್ನೂ, ಪ್ಲಾನನ್ನೂ ಎಷ್ಟೆಷ್ಟು ಸಾರಿ ಬದಲಾವಣೆ ಮಾಡಲಾಯಿತು ? ಎಷ್ಟಾವರ್ತಿ ಸರ್ವೆ ಮಾಡಲಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.–7,900 ರೂಪಾಯಿಗಳಿಗೆ ಒಂದಾವರ್ತಿ ಆಯಿತು. 13,800 ರೂಪಾಯಿಗಳಿಗೊಂದಾವರ್ತಿ ಆಯಿತು. ನಲವತ್ತು ಸಾವಿರಕ್ಕೊಂದಾವರ್ತಿ ಆಯಿತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—7,900ಕ್ಕೆ ಮಾಡಿದ್ದನ್ನು 13 ಸಾವಿರಕ್ಕೆ ಏರಿಸಲು ಕಾರಣವೇನು ? How many times designs were prepared?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೂರು ದಫ ಬೇರೆ ಬೇರೆ ಎಷ್ಟಿಮೇಟುಗಳಾದವೆಂದು ಆಗಲೇ ಹೇಳಿದ್ದೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಒಂದು ಪರ್ಸೆಂಟ್ ರಿಟರ್ನ್ ಬಂದರೆ ಯಾವ ಯಾವ ಕೆರೆಗಳನ್ನು ದುರಸ್ತಿ ಮಾಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೀರ ?

ಶ್ರೀ ಎಚ್. ಎಂ. ಚನ್ನಬಸಪ್ಪ.–ಅದನ್ನಿನ್ನೂ ನಿರ್ಧರ ಮಾಡಿಲ್ಲ.

ಅಧ್ಯಕ್ಷರು.—ಈ ಕೆರೆಯ ವಿಚಾರವೊಂದನ್ನು ಮಾತ್ರ ತಾವೀಗ ಕೇಳಬೇಕೇ ಏನಾ ಬೇರೆ ಕೆರೆಗಳ ವಿಚಾರವನ್ನು ಕೇಳಲಿಕ್ಕೆ ಬರುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಕೆರೆಯ ಕೆಳಗೆ ಈಗ ತರೀ ಕಂದಾಯವನ್ನು ವಸೂಲ್ಮಾಡುತ್ತಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಿಮಿಷ್ಕ್ ಕೊಟ್ಟು ಕೊಂಡು ಬರುತ್ತಿದ್ದೇವೆ.

Dr. A. R. KARISIDDAPPA.—With reference to the answer to clause (*b*), may I know when this will be taken up under Special Minor Irrigation? now or when ?

Sri H. M. CHANNABASAPPA.—If it is found feasible we will take it up this year alone.

Dr. A. R. KARISIDDAPPA.—Since when this examination is going on ?

Sri H. M. CHANNABASAPPA.—It will be done within a month.

ಶ್ರೀ ಕೆ. ಕೆಂಚಪ್ಪ.—ಈ ಕೆರೆಯ ಕೆಳಗೆ 61 ಎಕರೆ 12 ಗುಂಟೆ ಅಚ್ಚುಕಟ್ಟಿದೆ ಎಂದು ಹೇಳೋಣವಾಯಿತು. ಬ್ಲಾಕ್ ರೇಟಿನ ಪ್ರಕಾರ ಕಂದಾಯ ವಸೂಲ್ಮಾಡುತ್ತಿದ್ದೀರೋ ಅಥವಾ ವಾಟರ್‌ರೇಟ್ ವಸೂಲ್ಮಾಡುತ್ತಿದ್ದೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಫಸಲಾಗದಿದ್ದಾಗ ಅರ್ಧ ಕಂದಾಯವನ್ನು ಮಾಫಿ ಮಾಡಿಕೊಂಡು ಬಂದಿದ್ದೇವೆ.

ಶ್ರೀ ಕೆ. ಕೆಂಚಪ್ಪ.—ಈಗ ಅಚ್ಚುಕಟ್ಟಿಗೆಲ್ಲ ತರೀ ಫಸಲು ಅನುಕೂಲವಾಗುವ ಪಕ್ಷಕ್ಕೆ ಆ ಕೆರೆಯನ್ನೇಕೆ ರಿಪೇರಿ ಮಾಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಿಟರ್ನ್ ಒಂದು ಪರ್ಸೆಂಟ್ ಆದರೂ ಬರಬೇಕೆಂಬ ತೀರ್ಮಾನಕ್ಕೆ ನರ್ಕಾರ ಬರಬೇಕೆಂದಿದೆ. ಅದು ತೀರ್ಮಾನವಾದನಂತರ ಕೆರೆ ಒಂದು ಪರ್ಸೆಂಟ್ ರಿಟರ್ನ್ನೊಳಗಿದ್ದರೆ ಆಗಬಹುದು.

Supply of Power to Villages in Tarikere Taluk.

Q.—2178. Sri T. R. PARAMESHWARAIAH (Tarikere).—

Will the Government be pleased to state :—

(*a*) the names of villages in Tarikere Taluk which have requested for the supply of power ;

(*b*) the number of villages which are proposed to be provided with electricity this year ?

A.—Sri H. M. CHANNABASAPPA (Minister for Public Works).—

Names.

(*a*) 1 Hosur
2 Lambanahalli
3 Erehalli
4 Naganahalli
5 Mirlanahalli
6 Dornahal
7 Bettadahalli

(*b*) Two.

ಶ್ರೀ ಟಿ. ಆರ್ ಪರಮೇಶ್ವರಯ್ಯ.—ತರೀಕೆರೆ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯನ್ನು ನರಬರಾಯಿ ಮಾಡಬೇಕೆಂದು ಅರಿಕೆ ಮಾಡಿಕೊಂಡಿರುವ ಗ್ರಾಮಗಳೆಷ್ಟು ಎಂದು ಕೇಳಿರುವುದಕ್ಕೆ ಉತ್ತರವಾಗಿ ಏಳು ಗ್ರಾಮಗಳ ಹೆನರುಗಳನ್ನು ತಿಳಿಸಿದ್ದೀರಿ. ಇದು up-to-date ಉತ್ತರವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—up-to-date ಎಂದರೆ, ತಾವು ಪ್ರಶ್ನೆಯನ್ನು ಕಳುಹಿಸಿದನಂತರ ನಾವು ಅದಕ್ಕೆ ತರಿಸಿಕೊಂಡಿರುವ ಉತ್ತರ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಇತ್ತೀಚೆಗೆ ಕೇಳಿಕೊಂಡಿರುವ ಗ್ರಾಮಗಳಿಗೂ ಒದಗಿಸುವ ವಿಷಯವನ್ನು ಪರಿಶೀಲನೆಗೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಆ ಪ್ರಶ್ನೆ ಈಗ ಬರುವುದಿಲ್ಲ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಉಳಿದ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸದೆ ಇರಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದಾಜು ತಯಾರಾಗುತ್ತಿದೆ.

Hospital for Bellavi, Tumkur Taluk.

Q.—2284. Sri G. N. PUTTANNA (Tumkur).—

Will the Government be pleased to state :—

(*a*) whether they are aware that there is no hospital within a radius of ten miles from Bellavi, Tumkur taluk ;

(*b*) whether they are aware that there is not even midwifery facility at Bellavi and other surrounding villages;

(*c*) whether they propose to sanction a Local Fund Dispensary to Bellavi and also a midwife early ?

A.—Sri K. K. HEGDE (Minister for Health).—

(*a*) There are two medical institutions within a radius of ten miles from Bellavi. The General Hospital, is only at a distance of 8 miles from Bellavi and the dispensary at Chelur at a distance of only 7 miles from Bellavi.

(*b*) Yes.

(*c*) This question will be considered in consultation with the Local Bodies when a request is made.

As regards answer to sub-question (*c*), after the answers were sent for printing, a request was received from the Bellavi Hobli Mandal Congress Committee and that is under consideration.

ಶ್ರೀ ಜಿ. ಎಸ್. ಪುಟ್ಟಣ್ಣ.—ಆ ಪ್ರಶ್ನೆಗೆ ಉತ್ತರವಾಗಿ 'Yes' ಎಂದು ಹೇಳಿದ್ದೀರಿ. ಅಲ್ಲಿ ಹರಿಗೆಗೆ ಮಿಡ್‌ವೈಫ್ ಇಲ್ಲದೆ ಇತ್ತೀಚೆಗೆ ಹತ್ತು ಹದಿನೈದು ಜನ ಹೆಂಗಸರು ಸತ್ತಿದ್ದಾರೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಅಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆ "whether they are aware that there is not even midwifery facility at Bellavi and other surrounding villages' ಎಂದಿನ. ಇದಕ್ಕೆ 'yes' ಎಂದು ಉತ್ತರ ಹೇಳಿದ್ದಾರೆ

ಶ್ರೀ ಜಿ. ಎಸ್. ಪುಟ್ಟಣ್ಣ.—'Yes' ಎಂದು ಹೇಳಿದ್ದಾರೆ. ಹೀಗೆ 'ಮಿಡ್ ವೈಫ್' ಇಲ್ಲದೆ ಹತ್ತು ಹನ್ನೆರಡುಜನ ಹೆಂಗಸರು ಸತ್ತರೆಂಬುದು ಅವರಿಗೆ ಗೊತ್ತಿದೆಯೆ ?

ಶ್ರೀ ಕೆ. ಕೆ. ಹೆಗ್ಗಡೆ.—ಇದುವರೆಗೆ ಸರ್ಕಾರಕ್ಕೆ ಗೊತ್ತಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಹಾಗಾದರೆ ಜಾಗ್ರತೆ 'ಮಿಡ್‌ವೈಫ್' ಮಂಜೂರು ಮಾಡುತ್ತೀರ ?

ಶ್ರೀ ಕೆ. ಕೆ. ಹೆಗ್ಗಡೆ.—ಅಲ್ಲಿ ಒಬ್ಬರು ಮಿಡ್‌ವೈಫ್ ಇದ್ದರು. ಅಲ್ಲಿನ ಸ್ಥಳೀಯ ಸಂಸ್ಥೆಯವರು ಹಣವನ್ನು ಕೊಡಲು ಸಾಧ್ಯವಿಲ್ಲವೆಂದು ಹೇಳಿದುದರಿಂದ 1956 ರಿಂದ ತೆಗೆದು ಹಾಕಿದ್ದೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಯಾರು ಹಣವನ್ನು ಕೊಡುವವರು, ಎಷ್ಟು ಹಣ ಕೊಡಬೇಕು ?

ಶ್ರೀ ಕೆ. ಕೆ. ಹೆಗ್ಗಡೆ.—ಅಲ್ಲಿನ ಸ್ಥಳೀಯ ಸಂಸ್ಥೆಯವರು ಮಿಡ್‌ವೈಫಿನ ಸಂಬಳವನ್ನು ಕೊಡಬೇಕು. ಆದರೆ ಅವರು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದಮೇಲೆ, ತೆಗೆದುಹಾಕಿದ್ದಾರೆ.

Dr. T. PARTHASARATHY.—In the revised answer the Hon'ble Minister has stated something about the request received from the Mandal Congress Committee and that it was under consideration. Why should that alone be mentioned ?

Mr. SPEAKER.—A request was received after the answers to the question were sent to the Press.

Sri K. L. NARASIMHIAH.—The answer to question (*c*) is that it will be considered in consultation with the Local Bodies when a request is made. ಈ ವಿಷಯವಾಗಿ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಎಷ್ಟು ಸಾರಿ ಕೇಳಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಕೆ. ಹೆಗ್ಗಡೆ.—ನಮ್ಮ ಗಮನಕ್ಕೆ ಇದುವರೆಗೂ ಬಂದಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಬಹಳ ವರ್ಷಗಳಿಂದಲೂ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಎಲ್ಲರೂ ಕೇಳಿದ್ದಾರೆಂಬುದು ಗೊತ್ತಿದೆಯೆ ?

ಶ್ರೀ ಕೆ. ಕೆ. ಹೆಗ್ಗಡೆ.—ಇಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಜನರು ಕೇಳಿರುವುದು ಗೊತ್ತಿದೆಯೆ ?

ಶ್ರೀ ಕೆ. ಕೆ. ಹೆಗ್ಗಡೆ.—ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಒಂದು ಡಿಸ್ಪೆನ್ಸರಿ ಇದ್ದರೆ ಅದರ ಜೊತೆಗೆ ಮಿಡ್‌ವೈಫ್ ಕೊಡುತ್ತಾರೆಯೆ ?

ಅಧ್ಯಕ್ಷರು.—ಅವರು ಆಗಲೇ ಹೇಳಿದ್ದಾರೆ ; ಮಿಡ್‌ವೈಫಿನ ಸಂಬಳವನ್ನು ಸ್ಥಳೀಯ ಸಂಸ್ಥೆಯವರು ಕೊಟ್ಟರೆ ನೇಮಕಮಾಡುತ್ತಾರೆಂದು ಹೇಳಿದ್ದಾರೆ.

Sri G. N. PUTTANNA.—It is stated "when a request is made" in answer to (*c*). May I ask—by whom ; at what time and to whom ?

(*Laughter*)